JULY 16, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಕರ್ನಾಟಕ ಅರಣ್ಯ ಇಲಾಖೆಯು,** ರಾಜ್ಯದಲ್ಲಿ ಹೆಚ್ಚುತ್ತಿರುವ ಆನೆ– ಮಾನವ ಸಂಘರ್ಷ ನಿಯಂತ್ರಿಸಲು, ಭಾರತೀಯ ವಿಜ್ಞಾನ ಸಂಸ್ಥೆ–ಐಐಎಸ್ಸಿ ಯೊಂದಿಗೆ ಮಹತ್ವದ ಒಡಂಬಡಿಕೆಗೆ ಸಹಿ ಹಾಕಿದೆ. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ, ರಾಜ್ಯ ಅರಣ್ಯ ಮತ್ತು ಜೀವಿಶಾಸ್ತ್ರ ಖಾತೆ ಸಚಿವ ಈಶ್ವರ ಖಂಡ್ರೆ ಅವರು, ಯೋಜನೆಗೆ 4 ಕೋಟಿ 74 ಲಕ್ಷ ರೂಪಾಯಿ ವಿನಿಯೋಗಿಸಲಾಗುವುದು, ಆಧುನಿಕ ತಂತ್ರಜ್ಞಾನಗಳಾದ ಸ್ಯಾಟಲೈಟ್ ಟೆಲಿಮೆಟ್ರಿ, ಕ್ಯಾಮರಾ ಟ್ರಾಪ್ ಹಾಗೂ ಜಿ.ಐ.ಎಸ್ ಮಾದರಿಗಳ ಮೂಲಕ, ಆನೆಗಳ ಆವಾಸ ಸ್ಥಾನ ಹಾಗೂ ಆನೆ ಪಥಗಳನ್ನು ಗುರುತಿಸಲಾಗುವುದು, ರೈತರ ಬೆಳೆ ರಕ್ಷಣೆಗೆ ಮುನ್ನೆಚ್ಚರಿಕೆಯನ್ನು ನೀಡಲಾಗುವುದು ಎಂದಿದ್ದಾರೆ.

<><><>

**ಆತ್ಮ ನಿರ್ಭರ ಭಾರತ: ಪ್ರಧಾನಮಂತ್ರಿಗಳ,** ಕಿರು ಆಹಾರ ಸಂಸ್ಕರಣಾ ಉದ್ದಿಮೆ– ಪಿ.ಎಂ.ಎಫ.ಎಂ.ಇ ಯೋಜನೆಯಿಂದ, ಸಣ್ಣ ಆಹಾರ ಉತ್ಪಾದನಾ ಘಟಕಗಳ ಸುಸ್ಥಿರ ಅಭಿವೃದ್ಧಿಗೆ ಸಹಕಾರಿಯಾಗಿದೆ. ಯೋಜನೆಯ ಮೂಲಕ ಆರ್ಥಿಕ ಸಹಕಾರವನ್ನು ಪಡೆದು, ಯಶಸ್ವಿ ಆಹಾರ ಉದ್ಯಮ ನಡೆಸುತ್ತಿರುವ, ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು, ಕಳಸಿನಕೊಪ್ಪ ಗ್ರಾಮದ, ಗಂಗವ್ವ ವಿರೂಪಾಕ್ಷಿ ಗಂಗನ್ನವರ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ಹಂಚಿಕೊಂಡಿದ್ದಾರೆ.

<><><>

**ಧ್ವನಿ: ಗಂಗವ್ವ ಗಂಗನ್ನವರ 38 ಸೆಕೆಂದುಗಳು**

<><><>

**ಸಂಸತ್ತಿನ ಮುಂಗಾರು ಅಧಿವೇಶನ,** ಈ ತಿಂಗಳ 21 ರಿಂದ ಆರಂಭವಾಗಲಿರುವ ಹಿನ್ನೆಲೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ಹೊಸದಿಲ್ಲಿಯಲ್ಲಿ, ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಕರ್ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದರು. ಈ ಕುರಿತು ಸಾಮಾಜಿಕ ಜಾಲತಾಣ, ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ರಾಜ್ಯಸಭೆಯ ಅಧಿವೇಶನ ಫಲಪ್ರದವಾಗಿ ನಡೆಯಬೇಕು ಎನ್ನುವುದು ವಿರೋಧ ಪಕ್ಷಗಳ ಆಶಯವಾಗಿದೆ. ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರಗಳು, ಆರ್ಥಿಕತೆ, ವಿದೇಶಾಂಗ ನೀತಿ ಸೇರಿದಂತೆ, ಹಲವು ವಿ ‘ಯಗಳ ಕುರಿತು ಚರ್ಚೆ ನಡೆಯಬೇಕಿದೆ ಎಂದು ಮನವಿ ಮಾಡಿರುವುದಾಗಿ ತಿಳಿಸಿದ್ದಾರೆ.

<><><>

**ಪ್ರಧಾನ ಮಂತ್ರಿ ಜನಜಾತಿ** ಉನ್ನತ ಗ್ರಾಮ ಅಭಿಯಾನದಡಿ, ಧರ್ತಿ ಆಬಾ ಜನಭಾಗಿ ಅಭಿಯಾನ ಕಾರ್ಯಕ್ರಮ, ಇಂದಿನಿಂದ, 30 ರವರೆಗೆ ಆಯೋಜಿತವಾಗಿದೆ. ಬಳ್ಳಾರಿ ಜಿಲ್ಲೆಯ, ಎಲ್ಲ ಗ್ರಾಮಗಳಲ್ಲಿ ನಡೆಯಲಿರುವ ಅಭಿಯಾನಕ್ಕೆ ಸಂಸದರಾದ ಇ.ತುಕರಾಂ ಚಾಲನೆ ನೀಡಿದರು. ಈ ಸಂದರ್ಭ ಮಾತನಾಡಿದ ಅವರು, ಬುಡಕಟ್ಟು ಸಮುದಾಯಗಳು ಸರ್ಕಾರದ ಯೋಜನೆಗಳ ಸದುಪಯೋಗ ಪಡೆದುಕೊಂಡು, ಮುಖ್ಯವಾಹಿನಿಗೆ ಬರಬೇಕು ಎಂದರು.

<><><>

**ಮೈಸೂರು ನಗರ ಬಸ್ ನಿಲ್ದಾಣದಲ್ಲಿ,** ಕೆ.ಎಸ್.ಆರ್.ಟಿ.ಸಿ ಬಸ್ಸುಗಳಲ್ಲಿ ದೃಷ್ಠಿ ವಿಶೇಷಚೇತನರ ಸುಗಮ ಪ್ರಯಾಣಕ್ಕೆ ಸಹಕಾರಿಯಾಗುವಂತೆ, ಅಳವಡಿಸಲ್ಪಟ್ಟ ಧ್ವನಿ ಸ್ಪಂದನೆ ಯೋಜನೆಗೆ, ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

<><><>

**ಒಂದೂವರೆ ದಶಕಕ್ಕಿಂತ ಹೆಚ್ಚು** ಕಾಲ, ಸಾಗುವಳಿ ಮಾಡಿದ ಬಗರ್ ಹುಕುಂ ಭೂಮಿಯನ್ನು ಸಕ್ರಮಗೊಳಿಸಿ, ಭೂ ಒಡೆತನದ ಹಕ್ಕನ್ನು ರೈತರಿಗೆ ನೀಡಲಾಗುವುದು ಎಂದು ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ. ನಾಗಮಂಗಲ ವಿಧಾನಸಭಾ ಕ್ಷೇತ್ರದ ತಾಲೂಕು ಕಚೇರಿಯಲ್ಲಿ ಜರುಗಿದ, ಬಗರ್ ಹುಕುಂ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ,** ದೊಡ್ಡಬಳ್ಳಾಪುರ ತಾಲ್ಲೂಕಿನ, ರಾಜಘಟ್ಟ ಗ್ರಾಮ ಬೂದಿಗುಂಡಿಯಲ್ಲಿರುವ ಬೌದ್ಧ ಸ್ಥೂಪಗಳ ಸಂಶೋಧನೆಯ ಹಿನ್ನೆಲೆ, ಇಂದು ರಾಜ್ಯ ಪ್ರವಾಸೋದ್ಯಮ ಇಲಾಖೆ ಹಾಗೂ ಪುರಾವಸ್ತು ಇಲಾಖೆ ವತಿಯಿಂದ ಉತ್ಖನನಕ್ಕೆ ಚಾಲನೆ ದೊರೆಯಲಿದೆ.

<><><>

**ಮಾವಿನ ದರ ಕುಸಿತದಿಂದ ಕಂಗಾಲಾಗಿ** ಸಂಕಷ್ಟದಲ್ಲಿದ್ದ ಮಾವು ಬೆಳೆಗಾರರ ನೆರವಿಗೆ ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮವನ್ನು, ಚಿಕ್ಕಬಳ್ಳಾಪುರ ಜಿಲ್ಲೆಯ ರೈತರು ಶ್ಲಾಘಿಸಿದ್ದು, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಮಾರುಕಟ್ಟೆ ಮಧ್ಯೆ ಪ್ರವೇಶ ಯೋಜನೆಯಡಿ ಪ್ರತಿ ಕಿಲೋ ಗ್ರಾಂ ಮಾವಿಗೆ 4 ರೂಪಾಯಿಯಂತೆ, ಟನ್‌ವೊಂದಕ್ಕೆ 4 ಸಾವಿರ ರೂಪಾಯಿಗಳ ಬೆಂಬಲ ಬೆಲೆ ಘೋಷಿಸಲಾಗಿದೆ.

<><><>

**ಬಾಗಲಕೋಟೆ ಜಿಲ್ಲೆ,** ನವನಗರದ ಡಾಕ್ಟರ ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಜರುಗಿದ, ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ ತಿಮ್ಮಾಪುರ ಉದ್ಘಾಟಿಸಿದರು.

<><><>

**ಮಂಡ್ಯ ಜಿಲ್ಲೆ ಮನ್ ಮುಲ್** ಹಾಲು ಒಕ್ಕೂಟಕ್ಕೆ, ಉತ್ತರ ಪ್ರದೇಶ, ಛತ್ತಿಸಘಡ ಹಾಗೂ ಜಾರ್ಖಂಡ ರಾಜ್ಯದ ಮಾರುಕಟ್ಟೆಗಳಿಂದ 2 ಲಕ್ಷ ಲೀಟರ್ ಹಾಲಿನ ಬೇಡಿಕೆಯಿದ್ದು, ಹಾಲು ಒಕ್ಕೂಟ ಮಂಡಳಿ ಮೂಲಕ ಹಾಲು ಮಾರಾಟ ಮಾಡಲು ಯೋಜಿಸ್ಲಾಗಿದೆ ಎಂದು ಮನ್ ಮುಲ್ ನಿರ್ದೇಶಕ ಸಿ.ಶಿವಕುಮಾರ ಹೇಳಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>